# ಭಾರತೀಯ ಸಂಸ್ಕೃತಿಯ ಪ್ರಮುಖ ಲಕ್ಷಣಗಳು (ಭಾಗ 2)

ಆಧ್ಯಾತ್ಮಿಕತೆ: ಭಾರತದ ಆತ್ಮವೇ ಆಧ್ಯಾತ್ಮಿಕತೆ. ಆಧ್ಯಾತ್ಮಿಕ ಜ್ಞಾನವು ಜಗತ್ತಿಗೆ ಶಾಂತಿಯ ಮಂತ್ರ ನೀಡಿದೆ. ಸ್ವಾಮಿ ರಂಗನಾಥನಂದಜಿ: "ಋಷಿ ಪರಂಪರೆ - ರಾಜಪರಂಪರೆ. ಋಷಿ ಪರಂಪರೆ ರಾಜಪರಂಪರೆಗಿಂತ ನಿರಂತರ. ವೇದ ಕಾಲದಿಂದ ಏಕಮುಖ; ರಾಜಪರಂಪರೆ ಭಗ್ನ." ನಾನಕರ ಸಾಧನೆ. ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸರು, ರಮಣ ಮಹರ್ಷಿ ಮತ್ತು ವಿವೇಕಾನಂದರು.

ಯೋಗಿ ಅರವಿಂದರು "ಎಂದಿಗೂ ಭೌಗೋಳಿಕವಾಗಿ ಮತ್ತು ರಾಜಕೀಯವಾಗಿ ಒಗ್ಗೂಡಿರಲಿಲ್ಲ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಮತ್ತು ಸಾಗರಗಳ ನಡುವಿನ ಜನರು ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದೇ. ಆಕ್ರಮಣಗಳು, ವಿದೇಶಿಯರ ಆಳ್ವಿಕೆಗಳು ಭಾರತದ ಆತ್ಮವನ್ನು ಅದರಿಂದ ಬೇರ್ಪಡಿಸಲಾಗಲಿಲ್ಲ."

ಡಾ. ರಾಧಾಕೃಷ್ಣನ್‌ರವರು ಸಂದಿಗ್ಧ ಸಮಯ ಮತ್ತು ಇತಿಹಾಸದ ಆಘಾತಗಳನ್ನು ಭಾರತವು ತಡೆದುಕೊಂಡುದು ಇಲ್ಲಿನ ಆಧ್ಯಾತ್ಮಿಕ ಪರಂಪರೆಯಿಂದಾಗಿಯೇ ಹೊರತು ಯಾವುದೇ ರಾಜಕೀಯ ಅಥವಾ ಸಾಮಾಜಿಕ ಸಂಘಟನೆಯಿಂದಲ್ಲ ಎಂದು ಹೇಳಿರುವುದು ಭಾರತದ ಸಂಸ್ಕೃತಿಯ ಮೇಲೆ ಆಧ್ಯಾತ್ಮಿಕತೆಯ ಪ್ರಭಾವವನ್ನು ತಿಳಿಸುತ್ತದೆ. ಆಧ್ಯಾತ್ಮಿಕತೆಯು ಭಾರತದ ಸಂಸ್ಕೃತಿಯ ಆತ್ಮವಾಗಿದೆ. ಆತ್ಮದ ಇರುವಿಕೆಗೆ ಸಮ್ಮತ; ಅಲೌಕಿಕ ಜೀವನಕ್ಕೆ ಹೆಚ್ಚಿನ ಆದ್ಯತೆ. ತೀರ್ಥಕ್ಷೇತ್ರಗಳು, ಪವಿತ್ರ ಸ್ಥಳಗಳು, ಆಧ್ಯಾತ್ಮಿಕ ಕೇಂದ್ರಗಳಿಂದ ಸನಾತನ ಆದ್ಯಾತ್ಮಿಕ ಪರಂಪರೆಯನ್ನು ಜೀವಂತ.

ವೈವಿಧ್ಯತೆಯಲ್ಲಿ ಏಕತೆ:

ಭೂಮೇಲ್ಮೈ, ಜಾತಿ, ಜನಾಂಗ, ಭಾಷೆ, ಧರ್ಮ, ಆಹಾರ, ಉಡುಗೆ-ತೊಡುಗೆ ಇತ್ಯಾದಿಗಳಲ್ಲಿನ ವೈವಿಧ್ಯತೆ ಸಂಸ್ಕೃತಿಯಲ್ಲಿಯೂ ವ್ಯಕ್ತ. ಡಾ. ರಾಧಾಕುಮುದ್ ಮುಖರ್ಜಿಯವರು "ಭಾರತವು ವಿವಿಧ ಸಮುದಾಯ, ನಂಬಿಕೆಗಳು, ಸಂಪ್ರದಾಯಗಳು, ಧರ್ಮಗಳು, ಸಂಸ್ಕೃತಿಗಳು, ಆಚರಣೆಗಳು, ಭಾಷೆಗಳು, ಜಾತಿಗಳುand ಸಾಮಾಜಿಕ ವ್ಯವಸ್ಥೆಗಳಿಂದ ಕೂಡಿದ ಒಂದು ವಸ್ತು ಸಂಗ್ರಹಾಲಯದಂತಿದೆ."

ವಿಶಾಲವಾದ ಭಾರತದ ವೈವಿಧ್ಯತೆಯ ನಡುವೆಯೂ ಭಾರತ ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಏಕತೆಯಿಂದಿದೆ.

ಪಂಡಿತ್ ನೆಹರುರವರು "ಭಾರತವನ್ನು ನೋಡಿದವರು ಇಲ್ಲಿನ ವೈವಿಧ್ಯತೆ ಮತ್ತು ಏಕತೆಗಳಿಂದ ವಿಸ್ಮಿತರಾಗುತ್ತಾರೆ"

ಧಾರ್ಮಿಕ ಪ್ರಾಧಾನ್ಯತೆ: ಸಂಸ್ಕೃತಿಯ ಕೇಂದ್ರಬಿಂದು. ವೇದಗಳ ಸಾಹಿತ್ಯ, ಮಹಾಕಾವ್ಯಗಳು, ಪುರಾಣಗಳು ಜೀವನದ ಅವಿಭಾಜ್ಯ ಅಂಗ. ಬೌದ್ಧರಿಗೆ ತ್ರಿಪಿಠಕಗಳು, ಜೈನರಿಗೆ ಆಚಾರಾಂಗಗಳು, ಮುಸ್ಲಿಂರಿಗೆ ಕೂರಾನ್ ಮತ್ತು ಕ್ರೈಸ್ತರಿಗೆ ಬೈಬಲ್ ಮೊದಲಾದ ಕೃತಿಗಳು ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗೆ ಬಹುಮುಖ್ಯ ಕಾರಣ. ಧನಾತ್ಮಕತೆ, ದೈವಿಕ ಮನೋಭಾವ, ತ್ಯಾಗ, ಉತ್ತಮ ಚಾರಿತ್ರ್ಯ, ಸತ್ಯ, ಪ್ರೀತಿ, ಭ್ರಾತೃತ್ವ, ಕ್ಷಮಾಗುಣಗಳಂತಹ ಉದಾತ್ತ ಮೌಲ್ಯಗಳ ಬೆಳವಣಿಗೆಗೆ ಮೂಲ.

ಹಿಂದೂ ಧರ್ಮಿಯರಿಂದ ಪುರುಷಾರ್ಥಗಳನ್ನು ಜೀವನದ ಮೌಲ್ಯಗಳಾಗಿ ಸ್ವೀಕಾರ. ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮದಲ್ಲಿ ನಂಬಿಕೆ- ಮೋಕ್ಷ ಸಾಧನೆಗೆ ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗಗಳ ಅನುಸರಣೆ. ಜೈನ ಮತ್ತು ಬೌದ್ಧ ದರ್ಮಗಳಲ್ಲೂ ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆ - ಮೋಕ್ಷವೇ ಜೀವನದ ಅಂತಿಮ ಗುರಿ.

ಕರ್ತವ್ಯ ಪ್ರಜ್ಞೆ: ಕರ್ತವ್ಯ ಅಥವಾ ಕಾಯಕಕ್ಕೆ ಆದ್ಯತೆ. ವ್ಯಕ್ತಿ ಸಮಾಜದ ಭಾಗ - ಸಮಾಜ ಮತ್ತು ವ್ಯಕ್ತಿಗಳಿಂದ ಉಪಕೃತ. ಸಮಾಜಕ್ಕೆ, ಗುರು-ಹಿರಿಯರಿಗೆ, ತಂದೆ-ತಾಯಿಗಳಿಗೆ, ಪ್ರಾಣಿ-ಪಕ್ಷಿಗಳಿಗೆ, ಅಶಕ್ತರಿಗೆ ಸಹಕರಿಸುವ ಕರ್ತವ್ಯದ ಹೊಣೆ. ವೇದಗಳಲ್ಲಿ ಪಂಚಮಹಾಯಜ್ಞಗಳ ಉಲ್ಲೇಖ. ಶರಣರು ಕಾಯಕ ಸಂಸ್ಕೃತಿಗೆ ಆದ್ಯತೆ.

1. ಬ್ರಹ್ಮ ಯಜ್ಞ. 2. ದೈವ ಯಜ್ಞ. 3. ಪಿತೃಯಜ್ಞ. 4. ಅತಿಥಿ ಯಜ್ಞ. 5. ಬಲಿವೈಶ್ವದೇವ ಯಜ್ಞ.

ಅವಿಭಕ್ತ ಕುಟುಂಬ ಪದ್ಧತಿ: ವಸುದೈವ ಕುಟುಂಬಕಂ.ಹಬ್ಬ-ಹರಿದಿನಗಳು, ಜಾತ್ರೆಗಳು, ವಿವಾಹ ಮತ್ತಿತರ ವಿಶೇಷ ಸಮಾರಂಬಗಳಲ್ಲಿ ಒಟ್ಟುಗೂಡುವುದು ಸಾಮಾಜಿಕ ಪದ್ಧತಿಗಳಲ್ಲಿ ಒಂದು.

ಜಾತಿ ಪದ್ಧತಿ: ವರ್ಣ ವ್ಯವಸ್ಥೆಯ ರೂಪಾಂತರವೇ ಜಾತಿಪದ್ಧತಿ. ವೃತ್ತಿ ಆಯ್ಕೆಯ ಸ್ವಾತಂತ್ರ್ಯ. ಜಾತಿಯು ಹುಟ್ಟಿನಿಂದ ನಿರ್ಧಾರಿತ. ವೃತ್ತಿಗನುಗುಣವಾಗಿ ಸಾಮಾಜಿಕ ಸ್ತರ ವ್ಯವಸ್ಥೆಗೆ ಕಾರಣ.

ಸಂಸ್ಕೃತಿಯು ಮಾನವನ ಜೀವನದ ಅವಿಭಾಜ್ಯ ಅಂಗವಾಗಿದ್ದು, ಅದರ ಅಂಶಗಳನ್ನು ಅವನ ಜೀವನದ ಎಲ್ಲಾ ಮುಖಗಳಲ್ಲೂ ನೋಡಬಹುದು. ಭಾರತೀಯ ಸಂಸ್ಕೃತಿಯು ಮೌಲ್ಯಾಧಾರಿತವಾಗಿದ್ದು, ನಮ್ಮನ್ನು ಸುಸಂಸ್ಕೃತರನ್ನಾಗಿ ಮಾಡುವಲ್ಲಿ ಅದು ಪ್ರಮುಖ ಪಾತ್ರ ವಹಿಸುತ್ತಿದೆ. ನಾವು ನಮ್ಮ ಸಂಸ್ಕೃತಿಯನ್ನು ಹೆಮ್ಮೆಯಿಂದ ಅನುಸರಿಸುವುದಲ್ಲದೇ ಅದನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಜವಾಬ್ದಾರಿಯು ನಮ್ಮ ಮೇಲಿದೆ. ಏಕೆಂದರೆ, ನಮ್ಮ ಪೂರ್ವಿಕರು ನಮಗೆ ವರ್ಗಾಯಿಸಿರುವ ಸಂಸ್ಕೃತಿಯ ಕಾರಣದಿಂದಲೇ ಇಂದು ನಾವು ವಿಶ್ವಮಾನ್ಯರಾಗಿರುವುದು.

ಸಾರಾಂಶಗಳು:-

- **ಜನರ ಆಲೋಚನೆ ಮತ್ತು ನಡವಳಿಕೆಗಳ ಸ್ವರೂಪವೇ ಸಂಸ್ಕೃತಿ; ಸಂಸ್ಕೃತಿಯು ಮೌಲ್ಯಗಳು, ನಂಬಿಕೆಗಳು, ನಡವಳಿಕೆಗಳು ಮತ್ತು ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಅಂಶಗಳನ್ನು ಒಳಗೊಂಳ್ಳುತ್ತದೆ.**
- ಸಂಸ್ಕೃತಿಯಲ್ಲಿ ಮೂರ್ತ ಸಂಸ್ಕೃತಿ ಮತು ಅಮೂರ್ತ ಸಂಸ್ಕೃತಿಗಳೆಂದು ಎರಡು ವಿಧಗಳಿವೆ.
- ಸಮ್" ಎಂದರೆ ಉತ್ತಮ, ಎಲ್ಲಾ ಪ್ರಕಾರದಿಂದಲೂ, ಸುಂದರವಾಗಿ, ಒಳ್ಳೆಯ ಎಂಬ ಅರ್ಥಗಳಿವೆ. ಕೃತಿ" ಎಂಬ ಪದಕ್ಕೆ ಕಾರ್ಯ, ಕರ್ಮ, ಅನುಷ್ಠಾನ ಎಂಬ ಅರ್ಥಗಳಿವೆ.

- “ಮಾನವ ಸಮಾಜದ ಒಬ್ಬ ಸದಸ್ಯನಾಗಿ ಗಳಿಸಿಕೊಳ್ಳುವ ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನು, ಸಂಪ್ರದಾಯ ಮತ್ತು ಇತರೆ ಯಾವುದೇ ಸಾಮರ್ಥ್ಯಗಳು ಮತ್ತು ರೂಢಿಗಳನ್ನು ಹೊಂದಿರುವ ಸಂಕೀರ್ಣ ವ್ಯವಸ್ಥೆಯೇ ಸಂಸ್ಕೃತಿಯಾಗಿದೆ” – E. B. ಟೇಲರ್.
- ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿತವಾಗುವ ಸಂಸ್ಕೃತಿಯೇ ನಮ್ಮ ಸಾಂಸ್ಕೃತಿಕ ಪರಂಪರೆ.
- ಸಂಸ್ಕೃತಿಯಿಲ್ಲದೇ ಮಾನವನಿಲ್ಲ. ಮಾನವನಿಲ್ಲದೇ ಸಂಸ್ಕೃತಿ ಇಲ್ಲ.
- ಭಾರತೀಯ ಸಂಸ್ಕೃತಿಯು ಪ್ರಪಂಚದ ಅತೀ ಪ್ರಾಚೀನ ಸಂಸ್ಕೃತಿಯಾಗಿದ್ದು, ಹರಪ್ಪಾ ಮತ್ತು ವೇದಕಾಲದ ಸಾಂಸ್ಕೃತಿಕ ಆಚರಣೆಗಳು ಇಂದಿಗೂ ಚಾಲ್ತಿಯಲ್ಲಿವೆ.
- ಭಾರತೀಯ ಸಂಸ್ಕೃತಿಯು 5,000 ವರ್ಷಗಳಿಗೂ ಪ್ರಾಚೀನವಾದುದು. ನಮ್ಮ ಸಂಸ್ಕೃತಿಯು ರಾಷ್ಟ್ರದ ಆತ್ಮವಾಗಿದೆ. ನಮ್ಮ ಗತಕಾಲದ ಮತ್ತು ವರ್ತಮಾನದ ವೈಭವವನ್ನು ತಿಳಿಯಲು ಸಹಾಯಕವಾಗಿದೆ.
- ವಿಶ್ವದೃಷ್ಟಿ, ತಾಳ್ಮೆ, ನಿರಂತರತೆ, ಹೊಂದಾಣಿಕೆ, ಸ್ವೀಕರಿಸುವಿಕೆ, ಆಧ್ಯಾತ್ಮಿಕತೆ, ವೈವಿಧ್ಯತೆಯಲ್ಲಿ ಏಕತೆ, ಧಾರ್ಮಿಕ ಪ್ರಾಧಾನ್ಯತೆ, ಕರ್ತವ್ಯ ಪ್ರಜ್ಞೆ ಹಾಗೂ ಅವಿಭಕ್ತ ಕುಟುಂಬ ಪದ್ಧತಿ ಮತ್ತು ಜಾತಿ ಪದ್ಧತಿಗಳು ಭಾರತೀಯ ಸಂಸ್ಕೃತಿಯ ಪ್ರಮುಖ ಲಕ್ಷಣಗಳು.